

ಭೂತಾನ್‌ನಲ್ಲಿ
ಕನ್ನಡದ ರಂಗು

ಎನ್ನುತ್ತಾರೆ 'ಲ್ಯಾಂಪ್ಸ್' ಹೆಸರಿನ ಸ್ನೇಹಬಳಗವನ್ನು ಮಾಡಿಕೊಂಡಿರುವ ಮಂಜುನಾಥ್.

## ಪ್ರವಾಸದ ಉದ್ದೇಶ ಸ್ಪಷ್ಟವಿರಲಿ

ಸಮಾನ ಮನಸ್ಕರು, ಒಂದೇ ಹವ್ಯಾಸ ಇರುವವರು ಒಂದೆಡೆ ಸೇರಿದರೆ ಉತ್ತಮ. ಕೇವಲ ನಾನು ಇಂತಹ ದೇಶಕ್ಕೆ ಹೋಗಿಬಂದೆ ಎಂದು ಹೇಳಿಕೊಳ್ಳುವುದರಲ್ಲಿ ಹಿರಿಮೆ ಇಲ್ಲ. ಥಾಯ್ಲೆಂಡ್ ನೋಡುವುದರೊಂದಿಗೆ ಅಲ್ಲಿನ ಕೃಷಿಯನ್ನೂ ವೀಕ್ಷಿಸಿ ಬರುವ ರೈತರು, ಭೂತಾನ್ ನೋಡಿ ಬರುವುದರೊಂದಿಗೆ ಅಲ್ಲಿನ ರಾಷ್ಟ್ರೀಯ ಪತ್ರಿಕೆ 'ಕುನ್ಸೆಲ್' ಕಚೇರಿಗೆ ಭೇಟಿ ನೀಡಿ ಅವರ ಕಾರ್ಯವಿಧಾನವನ್ನು ತಿಳಿದು ಬರುವ ಪತ್ರಕರ್ತರು, ಪಿಕ್ಟೋರಿಯಲ್ ಫೋಟೋಗ್ರಫಿಗಾಗಿ ಇಂಡೋನೇಷಿಯಾಗೆ ಹೋಗಿ ಬರುವ ಛಾಯಾಗ್ರಾಹಕರು ಇದಕ್ಕೆ ಉದಾಹರಣೆ. ಹಾಗೆಂದು ಎಲ್ಲರಿಗೂ ಹವ್ಯಾಸವಿರಬೇಕೆಂದಲ್ಲ. ಹೋದ ಸ್ಥಳದ ಬಗ್ಗೆ ಆದಷ್ಟು ತಿಳಿದು, ಕುತೂಹಲದ ಕಣ್ಣಿನಿಂದ ನೋಡಿ, ಅಲ್ಲಿನ ಆಹಾರ, ಜನಜೀವನ, ಸಾಮಾಜಿಕ ಪರಿಸ್ಥಿತಿ ತಿಳಿದರೆ ಪ್ರವಾಸ ಅರ್ಥಪೂರ್ಣವಾಗಿರುತ್ತದೆ.

## ಹೋಗುವ ದೇಶದ ಬಗ್ಗೆ ಮಾಹಿತಿ

ಈಗ ಹಲವು ದೇಶಗಳ ಪ್ರವಾಸ ಕಥನಗಳು ಕನ್ನಡದಲ್ಲಿಯೇ ಲಭ್ಯವಿವೆ. ಇಂಟರ್ನೆಟ್ ಮೂಲಕವೂ ನಾವು ಭೇಟಿ ನೀಡುವ ದೇಶದ ಬಗ್ಗೆ ಸಾಕಷ್ಟು ಚಿತ್ರ–ವಿಡಿಯೋಗಳ ಮೂಲಕ ಮಾಹಿತಿ ಸಂಗ್ರಹಿಸಬಹುದು. ಎಷ್ಟು